**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ**
**(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)**
ನಿಗಮ ಕಾರ್ಯಾಲಯ, ಚಾವಿಸನಿನಿ,
ಮೈಸೂರು-570017
Telephone No: 0821-2343384

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,CESC, Mysore-570017
**Web Site:** www.cescmysore.org.
**E-Mail**: gmhrd@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ:ಚಾವಿಸನಿನಿ/ಆ ಮತ್ತು ಮಾಸಂ/05/04/2023-24/ cys-1904 ದಿನಾಂಕ: 25 MAR 2024

ಲಗತ್ತು: ನಮೂನೆಗಳು

## ಸುತ್ತೋಲೆ

ವಿಷಯ: ಅಧಿಕಾರಿಗಳು ಮತ್ತು ನೌಕರರು ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವಿವರಣಾ ಪಟ್ಟಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ84/24333/2021-22 ದಿನಾಂಕ:22.06.2021.

2. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 12 ಸೇನಿಸಿ 2022 ದಿನಾಂಕ:13.01.2023.

3. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ99/ಬಿ5ಬಿ/11333/2009-10 ದಿನಾಂಕ:15.03.2024.

**************

ಚಾವಿಸನಿನಿ ನೌಕರರ ಸೇವಾ(ನಡತೆ) ನಿಯಮಗಳು 2021 ನಿಯಮಾವಳಿ 24 ರಅನ್ವಯ, ನಿಗಮದ ಸಿಬ್ಬಂದಿಯು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರಗಳನ್ನು ಪ್ರತೀ ವರ್ಷವೂ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳಿಗೆ ಸಲ್ಲಿಸಬೇಕಾಗಿರುತ್ತದೆ. ಸಿಬ್ಬಂದಿ ತಮ್ಮ ಆಸ್ತಿ ಮತ್ತು ಹೊಣೆಗಳ ವಿವರಗಳ ಪಟ್ಟಿಯನ್ನು ನಿಗದಿತ ದಿನಾಂಕದಂದು ಸಲ್ಲಿಸದಿದ್ದಲ್ಲಿ, ಕರ್ತವ್ಯ ಲೋಪವೆಂದು ಪರಿಗಣಿಸಲಾಗುವುದು. ಈ ವಿಷಯದಲ್ಲಿ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ:

1. ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ನಮೂನೆ-1 ಮತ್ತು II ರಲ್ಲಿ ನಿಗಮದ ಸಿಬ್ಬಂದಿಯು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಾರಿಕೆ ಪಟ್ಟಿಯನ್ನು **ದಿನಾಂಕ:01.04.2023 ರಿಂದ ದಿನಾಂಕ:31.03.2024** ರವರೆಗೆ ಅನ್ವಯವಾಗುವಂತೆ ಸಲ್ಲಿಸತಕ್ಕದ್ದು.
2. ಚಾವಿಸನಿನಿಯ ಎ ಮತ್ತು ಬಿ ಪದವೃಂದದ ಅಧಿಕಾರಿಗಳು ವಿವರಗಳನ್ನು ಭರ್ತಿಮಾಡಿ ಹಾಗೂ ತಮ್ಮ ಪಿ.ಐ.ಎನ್ ಸಂಖ್ಯೆಯನ್ನು ತಪ್ಪದೇ ನಮೂದಿಸಿ ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.,), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರುರವರಿಗೆ ನೇರವಾಗಿ ಕಳುಹಿಸತಕ್ಕದ್ದು.
3. ಸಿಬ್ಬಂದಿಗಳು ಆರ್ಥಿಕ ವರ್ಷ 2023-24 ಕ್ಕೆ (ದಿನಾಂಕ:31.03.2024 ರಂದಿಗೆ) ಇರುವ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಂಬಂಧಿಸಿದ ಕಛೇರಿಗಳಿಗೆ ಸಲ್ಲಿಸಲು ಕೊನೆಯ ದಿನಾಂಕ: 31.05.2024 ಹಾಗೂ ಚಾವಿಸನಿನಿಯ ಎ ಮತ್ತು ಬಿ ಪದವೃಂದದ ಅಧಿಕಾರಿಗಳು ಜೂನ್ 2024 ರ ಮಾಹೆಯ ವೇತನದ ಹುಂಡಿಯಲ್ಲಿ ಸಲ್ಲಿಸಿರುವ ಬಗ್ಗೆ ದೃಢೀಕರಿಸತಕ್ಕದ್ದು.
4. ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳು ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು 'ಸಿ' ಮತ್ತು 'ಡಿ' ಗುಂಪಿನ ನೌಕರರಿಂದ ಪಡೆದು ಅವರ ಕಛೇರಿಯಲ್ಲಿ ವೈಯಕ್ತಿಕ ಕಡತಗಳನ್ನು ನಿರ್ವಹಿಸತಕ್ಕದ್ದು.

ಈ ವಿಷಯಕ್ಕೆ ಸಂಬಂಧಿಸಿದಂತೆ, ಮೇಲಾಧಿಕಾರಿಗಳು ಅವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಯ ಗಮನಕ್ಕೆ ಮೇಲಿನ ಸೂಚನೆಗಳನ್ನು ತಪ್ಪದೇ ತರಲು ಸೂಚಿಸಿದೆ.ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಾರಿಕೆ ವಿವರವನ್ನು ಸಲ್ಲಿಸಬೇಕಾಗಿರುವ ನಮೂನೆಯನ್ನು ಚಾವಿಸನಿನಿಯ ಜಾಲತಾಣ: https://cescmysore.karnataka.gov.in ಇಲ್ಲಿ ಪಡೆಯಬಹುದಾಗಿದೆ.

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.,)
ಚಾವಿಸನಿನಿ, ಮೈಸೂರು.

**ಚಾವಿಸನಿನಿಯ ಸುತ್ತೋಲೆ ಸಂಖ್ಯೆ:ಚಾವಿಸನಿನಿ/ಆ ಮತ್ತು ಮಾ.ಸಂ./05/04/2023-24/ಸಿವೈಎಸ್-1904 ದಿನಾಂಕ:25.03.2024 ರ ಅನುಬಂಧ**

# ನಮೂನೆ-1

# <u>ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತಿ</u>

ದಿನಾಂಕ:01.04.2023ರಿಂದ 31.03.2024ರವರೆಗಿನ ಸ್ಥಿರಾಸ್ತಿ ವಿವರಣಾ ಪಟ್ಟಿ

1. ಅಧಿಕಾರಿ/ನೌಕರನ ಹೆಸರು :
2. ಪಿನ್ ಸಂಖ್ಯೆ(ಇದ್ದಲ್ಲಿ) :
3. ಪ್ರಸ್ತುತ ಧಾರಣ ಮಾಡಿರುವ ಹುದ್ದೆ:
4. ವೇತನ ಶ್ರೇಣಿ ಮತ್ತು ಈಗಿನ ವೇತನ :

| ಆಸ್ತಿ ಇರುವ ಜಿಲ್ಲೆ, ಉಪ ವಿಭಾಗ, ತಾಲ್ಲೂಕು, ಗ್ರಾಮದ ಹೆಸರು | ಭೂಮಿ, ಆಸ್ತಿ/ಮನೆ ಮತ್ತು ಇತರ ಕಟ್ಟಡದ ಹೆಸರು ಮತ್ತು ವಿವರಗಳು, ಪಾವತಿಸಿರುವ ಬೆಲೆ | ಈಗಿನ ಮೌಲ್ಯ ಮಾಪನ (ಅಂದಾಜು) | ನಿಗಮದ ನೌಕರನ ಹೆಸರಿನಲ್ಲಿಲ್ಲದಿದ್ದರೆ, ಯಾರ ಹೆಸರಿನಲ್ಲಿದೆ & ನೌಕರನೊಂದಿಗೆ ಅವರಿಗಿರುವ ಸಂಬಂಧ | ಹೇಗೆ ಅರ್ಜಿಸಲಾಯಿತು, ಖರೀದಿಯ ಮೂಲಕವೇ, ಗುತ್ತಿಗೆಯ ಮೂಲಕವೇ, ಅಡಮಾನದ ಮೂಲಕವೇ, ಪಿತ್ರಾರ್ಜಿತವೇ ಅಥವಾ ಬೇರೆ ರೀತಿಯಲ್ಲಿ ಅರ್ಜಿಸಿದ್ದೇ? ಅರ್ಜಿಸಿದ ದಿನಾಂಕ | ಆಸ್ತಿಯಿಂದ ಬಂದ ವಾರ್ಷಿಕ ಆದಾಯ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

ಸಹಿ :
ಪದನಾಮ :

ಚಾವಿಸನಿನಿಯ ಸುತ್ತೋಲೆ ಸಂಖ್ಯೆ:ಚಾವಿಸನಿನಿ/ಆ ಮತ್ತು ಮಾ.ಸಂ./05/04/2023-24/ಸಿವೈಎಸ್-1904 ದಿನಾಂಕ:25.03.2024 ರ ಅನುಬಂಧ

## ನಮೂನೆ-2

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತಿ

ದಿನಾಂಕ:01.04.2023ರಿಂದ 31.03.2024ರವರೆಗಿನ ಸ್ಥಿರಾಸ್ತಿ ವಿವರಣಾ ಪಟ್ಟಿ

1. ಅಧಿಕಾರಿ/ನೌಕರನ ಹೆಸರು :
2. ಪಿನ್ ಸಂಖ್ಯೆ(ಇದ್ದಲ್ಲಿ) :
3. ಪ್ರಸ್ತುತ ಧಾರಣ ಮಾಡಿರುವ ಹುದ್ದೆ:
4. ವೇತನ ಶ್ರೇಣಿ ಮತ್ತು ಈಗಿನ ವೇತನ :

| ಕ್ರಮ ಸಂಖ್ಯೆ | ಬ್ಯಾಂಕುಗಳು/ಅಂಚೆ ಕಛೇರಿಯಲ್ಲಿ ಹೊಂದಿರುವ ಖಾತೆಗಳು/ಸ್ಟಾಕುಗಳು/ಷೇರುಗಳು/ಡಿಬೆಂಚರುಗಳು ಸೇರಿದಂತೆ ಚರಾಸ್ತಿಗಳ ವಿವರಗಳು | ಚರಾಸ್ತಿಯ ಮೌಲ್ಯ | ಖರೀದಿ/ ವಿಲೇವಾರಿಯ ದಿನಾಂಕ | ಅಂಕಣ ಸಂ.02ರಲ್ಲಿ ಹೇಳಿರುವ ಚರಾಸ್ತಿಯನ್ನು ಖರೀದಿಸುವುದಕ್ಕೆ ಇದ್ದ ಆದಾಯದ ಮೂಲಗಳು | ಆಸ್ತಿಯನ್ನು ಅರ್ಜಿಸಿದ ಬಗ್ಗೆ ಚಾವಿಸನಿನಿಗೆ ವರದಿ ಸಲ್ಲಿಸಿದ ದಿನಾಂಕ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

ಸಹಿ :

ಪದನಾಮ :